ಸಂಖ್ಯೆಯಲ್ಲಿ ಹುದ್ದೆಗಳು ತೆರವಾಗಿರುವುದು ತಾವು ಕೊಟ್ಟ ಪಟ್ಟಿಯಲ್ಲಿಯೇ ಕಾಣುತ್ತಿದೆ. ಆದ್ದರಿಂದ, ತಾವು ಹೇಳಿದ ಕಾರಣಕ್ಕಾಗಿ ಹುದ್ದೆಗಳನ್ನು ಖಾಲಿಯಾಗಿ ಮುಂದುವರೆಸದೇ, ಬೇರೆ ಏನಾದರೊಂದು ತುರ್ತು ಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಮಾಡುವಿರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ.ಬಿ. ಶ್ರೀರಾಮುಲು: ತಾವು ಏನು ಪ್ರಶ್ನೆಯನ್ನು ಎತ್ತಿದ್ದೀರಿ, ಅದಕ್ಕೆ ಸಂಬಂಧಿಸಿದಂತೆ ಆದಷ್ಟು ಬೇಗನೆ ಅದನ್ನು ಸರಿಪಡಿಸುವಂಥ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ಮಸ್ಕಿ ಪಟ್ಟಣದ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನು ಮಾಡುವ ಬಗ್ಗೆ.

45 (120) ಶ್ರೀ. ಪ್ರತಾಪಗೌಡ ಪಾಟೀಲ (ಮಸ್ಕಿ)

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮಸ್ಕಿ ಪಟ್ಟಣದ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಮಸ್ಕಿ ಪಟ್ಟಣವು ಲಿಂಗಸೂಗೂರು ತಾಲ್ಲೂಕಿನಲ್ಲಿದ್ದು, ಸದರಿ ತಾಲ್ಲೂಕಿನ ಜನಸಂಖ್ಯೆಯು 2001 ಜನಗಣತಿ ಪ್ರಕಾರ 3,20,879 ಆಗಿದೆ. ಮಾರ್ಗಸೂಚಿಗಳ ಪ್ರಕಾರ, ಪ್ರತಿ 1,200,000 ಜನಸಂಖ್ಯೆಗೆ ಒಂದರಂತೆ ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬಹುದಾಗಿದ್ದು. ಈಗಾಗಲೇ ಲಿಂಗಸಗೂರು ತಾಲ್ಲೂಕಿನಲ್ಲಿ, ಮೂರು ಸಮುದಾಯ ಆರೋಗ್ಯ ಕೇಂದ್ರಗಳು ಇರುವ ಕಾರಣ ಹೊಸ ಸಮುದಾಯ ಆರೋಗ್ಯ ಕೇಂದ್ರ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಶ್ರೀ ಪ್ರತಾಪಗೌಡ ಪಾಟೀಲ್: ಮಾನ್ಯ ಸಭಾಧ್ಯಕ್ಷರೆ, ಮಸ್ಕಿ ಪಟ್ಟಣಕ್ಕೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಒದಗಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿದಾಗ ಆ ತಾಲ್ಲೂಕಿನ ಜನಸಂಖ್ಯೆಗನುಗುಣವಾಗಿ ಸಮುದಾಯ ಆರೋಗ್ಯ ಕೇಂದವನ್ನು ಒದಗಿಸುವುದಕ್ಕೆ ಆಗುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಮಸ್ಕಿ ಪಟ್ಟಣ ಸುಮಾರು 25 ಸಾವಿರ ಜನಸಂಖ್ಯೆಯನ್ನು ಹೊಂದಿರುವಂಥ ಪಟ್ಟಣ ಮತ್ತು ಸುಮಾರು ಮೂರು ತಾಲ್ಲೂಕುಗಳ ವ್ಯಾಪ್ತಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ಕೇಂದ್ರ ಸ್ಥಾನವಾಗಿರುವುದರಿದ ಅಲ್ಲಿ ಈಗಿರುವಂಥ ಆಸ್ಪತ್ರೆಯ ಅನುಕೂಲಗಳು ಸಾಕಾಗುವುದಿಲ್ಲ. ಆದರೆ ಮಸ್ಕಿ ಪಟ್ಟಣ ಸುಮಾರು 25 ಸಾವಿರ ಜನಸಂಖ್ಯೆ ಹೊಂದಿದೆ. ಸುಮಾರು 3 ತಾಲ್ಲೂಕುಗಳ ವ್ಯಾಪ್ತಿಯ ಸುತ್ತಮುತ್ತಲ ಹಳ್ಳಿಗಳಿಗೆ ಕೇಂದ್ರ ಸ್ಥಾನವಾಗಿರುವುದರಿಂದ ಈಗಿರುವ ಆಸ್ಪತ್ರೆಯ ಅನುಕೂಲ ಸಾಕಾಗುವುದಿಲ್ಲ. ಈಗಾಗಲೇ 2006–07 ರಿಂದ ಸರ್ಕಾರದ ಮಟ್ಟದಲ್ಲಿ correspondence ನಡೆದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಈಗಾಗಲೇ ಪತ್ರ

ಸಂಖ್ಯೆ HSD 66 ರ ಪ್ರಕಾರ 2006–07ರಲ್ಲಿ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದಕ್ಕೆ ಜಿಲ್ಲಾ ಆರೋಗ್ಯ ಕೇಂದ್ರದಿಂದ ಕೆಲವು ಮಾಹಿತಿಗಳನ್ನು ಕೇಳಿದ್ದಾರೆ. ಆ ನಿಟ್ಟಿನಲ್ಲಿ ಇವತ್ತು ಸರ್ಕಾರಕ್ಕೆ ಸಾಕಷ್ಟು ಮಾಹಿತಿಯನ್ನು ಈಗಾಗಲೇ ನೀಡಲಾಗಿದೆ. ಹಿಂದೆ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಹಿಂದಿನ ಶಾಸಕರು ಕೊಟ್ಟಂಥ ಮನವಿಗೆ ಮಂಜೂರಾತಿ ಮಾಡಬಹುದೆಂದು ಆದೇಶವನ್ನು ಆ ಪತ್ರದ ಮೇಲೆ ಮಾಡಿದ್ದಾರೆ. ಆ ನಿಟ್ಟಿನಲ್ಲಿ ಮಸ್ಕಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು ಬಹಳಷ್ಟು ಅವಶ್ಯಕತೆ ಇದೆ. ಕಾರಣ, ಇದನ್ನು ತಾವು ಪರಿಗಣಿಸಿ, ಈ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಬೇಕು. ಏಕೆಂದರೆ, ಮಸ್ಕಿ ಪಟ್ಟಣ ತಾಲ್ಲೂಕು ಕೇಂದ್ರವಾಗುವ ಅವಕಾವಿದೆ. ಈಗಾಗಲೇ ಎಲ್ಲಾ ಆಯೋಗಗಳೂ ಇದನ್ನು ಹೇಳಿವೆ.

ಶ್ರೀ.ಬಿ.ಶ್ರೀರಾಮುಲು: ಮಸ್ಕಿ ಪಟ್ಟಣ ಲಿಂಗಸುಗೂರು ತಾಲ್ಲೂಕಿನಲ್ಲಿದೆ. ಕೇಂದ್ರ ಸರ್ಕಾರದ guidelines ಪ್ರಕಾರ ಪ್ರತಿ ಒಂದು ಲಕ್ಷ ಇಪ್ಪತ್ತು ಸಾವಿರ ಜನಸಂಖ್ಯೆ ಹೊಂದಿರುವ ಪ್ರದೇಶಕ್ಕೆ ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬಹುದು. ಆದರೆ, ಅಷ್ಟು ಜನಸಂಖ್ಯೆ ಇಲ್ಲದ ಕಾರಣ, ಲಿಂಗಸುಗೂರು ತಾಲ್ಲೂಕಿನಲ್ಲಿ 3 ಲಕ್ಷದ 20 ಸಾವಿರದ 879 ಜನಸಂಖ್ಯೆ ಇದ್ದು, ಮಾರ್ಗಸೂಚಿಗಳ ಪ್ರಕಾರ, ಮೂರು ಸಮುದಾಯ ಆರೋಗ್ಯ ಕೇಂದ್ರಗಳನ್ನು ಆ ತಾಲ್ಲೂಕಿಗೆ ಮಂಜೂರು ಮಾಡಲಾಗಿದೆ. ಲಿಂಗಸುಗೂರಿನಲ್ಲಿ ಹಳೆ ಹೊಸೂರಿನಲ್ಲಿ, ಮದುಗಲ್‌ನಲ್ಲಿ ಮೂರು ಈಗಾಗಲೇ ಮಂಜೂರಾತಿಯಾಗಿರುವ ಕಾರಣ ಒಂದು ಲಕ್ಷದ 20 ಸಾವಿರ ಜನಸಂಖ್ಯೆ ಇದ್ದರೆ ಮಾತ್ರ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬಹುದೆಂದು ಕೇಂದ್ರ ಸರ್ಕಾರದ ಮಾರ್ಗಸೂಚಿ ಇದೆ. ಅದಕ್ಕೋಸ್ಕರ ಲಿಂಗಸುಗೂರಿನಲ್ಲಿ 3 ಲಕ್ಷ 20 ಸಾವಿರದ 879 ಜನಸಂಖ್ಯೆ ಇರುವ ಕಾರಣ ಇನ್ನೊಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದಷ್ಟು ಬೇಗ ಈ ಸರ್ಕಾರಿ ಆಸ್ಪತ್ರೆಯನ್ನು ಯಾವ ರೀತಿಯಲ್ಲಿ ಮೇಲ್ದಜೇಗೇರಿಸಬೇಕನ್ನುವುದರ ಬಗ್ಗೆ ನಾನು ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯ ಸ್ಥಾಪನೆ ಬಗ್ಗೆ

46 (369) ಶ್ರೀ.ರೇವಣ್ಣ ಹೆಚ್.ಡಿ (ಹೊಳೇನರಸೀಪುರ)
ಶ್ರೀ.ಡಿ.ಸುಧಾಕರ, (ಮಾನ್ಯ ಸಮಾಜ ಕಲ್ಯಾಣ ಸಚಿವರು)

ಅ ಹಾಸನ ಜಿಲ್ಲೆ ಹೊಳೆನರಸಿಪುರ ತಾಲ್ಲೂಕು, ಪಡುವಲಹಿಪ್ಪ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡಿದೆಯೇ ಹಾಗಿದ್ದಲ್ಲಿ ಇದಕ್ಕಾಗಿ ಮೀಸಲಿಟ್ಟ ಹಣವೆಷ್ಟು;

ಪಡುವಲಹಿಪ್ಪ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ